ಚರ್ಚ್ ರಸ್ತೆ, ಲೂರ್ಡ್ಸ್ ಬಾಯ್ಸ್ ಸ್ಕೂಲ್ ಹತ್ತಿರ, ಮೇನ್ ರೋಡ್,
ಸಂಪರ್ಕಿಸಿ :
96201 62541

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಕಾರ್‌ವಾಷ್, ವ್ಹೀಲ್ಸ್ ಅಲೈನ್ ಮೆಂಟ್ & ಬ್ಯಾಲೆನ್ಸಿಂಗ್ ಮಾಡಲು ಬೇಕಾಗಿದ್ದಾರೆ.
ಶ್ರೀ ಪ್ರಿಯಾ ಕಾರ್ ಕೇರ್
ವಿದ್ಯಾನಗರ, ದಾವಣಗೆರೆ.
8867322545, 7349194155
88673 22645

**ಮಳಿಗೆ ಬಾಡಿಗೆಗಿದೆ**
ಕೆ.ಬಿ.ಬಡಾವಣೆ, ಲಾಯರ್ ರಸ್ತೆ, 1ನೇ ಮಹಡಿಯಲ್ಲಿ 40x44 ಅಡಿ, ಫರ್ನಿಚರ್ ಸಮೇತ ಎ.ಸಿ. ಸೌಲಭ್ಯವಿರುವ LIC ಆಫೀಸ್ ಮತ್ತು ಬ್ಯಾಂಕ್ ಗೆ ಅನುಕೂಲವಾದ ಮಳಿಗೆ ಬಾಡಿಗೆಗಿದೆ.
ಮಧ್ಯವರ್ತಿಗಳೂ ಸಹ ಸಂಪರ್ಕಿಸಬಹುದು.
97384 62378, 88928 44854
96665 53640

**ಶಿಕ್ಷಕಿಯರು ಬೇಕಾಗಿದ್ದಾರೆ**
ಕನಕ ಸೆಂಟ್ರಲ್ ಸ್ಕೂಲ್
ಹಗೇದಿಬ್ಬ ಸರ್ಕಲ್, ದಾವಣಗೆರೆ
NTC or PUC, B.A.,B.Com, B.Sc,B.B.A, Diploma
ಓದಿದವರು ಶಿಕ್ಷಕಿಯಾಗಿ ಕೆಲಸ ಮಾಡಲು ಆಸಕ್ತಿ ಇರುವವರು ಸಂಪರ್ಕಿಸಿ:
98866 78178

**SSLC FAILED BATCHES**
100% Results
ಸಿಂಚನ ಅಕಾಡೆಮಿ ದಾವಣಗೆರೆ.
90195 80600, 88614 45913

**ಹೋಟೆಲ್ ಬಾಡಿಗೆಗಿದೆ**
ನಗರದ ಕೊಂಡಜ್ಜಿ ರಸ್ತೆ, ದೇವನಗರಿ ಗ್ಯಾಸ್ ಗೋಡಾನ್ ಎದುರಿಗೆ ಸುಸಜ್ಜಿತ ವ್ಯವಸ್ಥೆಯುಳ್ಳ ಹೋಟೆಲ್ ನಡೆಸಲು ಮಳಿಗೆ ಖಾಲಿ ಇದೆ.
ಸಂಪರ್ಕಿಸಿ :
98458 85671

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಮದ್ಯಪಾನ ಬಿಡಬೇಕೇ, ಅಸ್ತಮಾ, ಅಲರ್ಜಿ, ಗ್ಯಾಸ್ಟಿಕ್, ವೈಟ್ ಲೋಸ್, ವೇಯ್ಟ್ ಗೈನ್**
ಸಂಪರ್ಕಿಸಿ :
ಪ್ರತಿ ತಿಂಗಳು 12,13 : 10 ರಿಂದ 3ರವರೆಗೆ
ಡಾ. ಶರ್ಮಾ, ಶ್ರೀ ಲಾಡ್ಜ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹತ್ತಿರ, ಪಿ.ಬಿ. ರೋಡ್, ದಾವಣಗೆರೆ.
98869 40831

**ಬೇಕಾಗಿದೆ**
ಸನ್ನಿಧಿ ಟ್ರೇಡಿಂಗ್ ಕೋ
ದಾವಣಗೆರೆ ವಿಭಾಗಕ್ಕೆ ವಾಹನ ಅಟ್ಯಾಚ್ ಮಾಡಿಕೊಳ್ಳಲಾಗುತ್ತದೆ. Maruthi Super Carry, Ashok Leykand Dost, Bolero Pickup
CNG ವಾಹನಗಳಿಗೆ ಆದ್ಯತೆ
8904580031, 8904580032
8904580037 8904580038

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**TEACHERS WANTED**
B.Sc, B.Ed - 6 Posts, BA, B.Ed - 6 Posts, NTC - 4 Posts
Computers - 2 Posts
B.PED / CPED - 2 Posts, Contact : SRIS, Gutturu, Harihara.
80950 09629

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ.
ಸಂಬಳ ದಿನಕ್ಕೆ 400ರೂ.
ಆಸಕ್ತರು ವಿಚಾರಿಸಿ.
99646 36217

**HOUSE TO LET**
(Veg Only)
2 BHK, 1st floor, # 1653/28, 4th cross, `Umesh Nilaya', Siddaveerappa Badavane, Davangere.
94484 46708

**SALES EXECUTIVES WANTED**
Male / Female
Good Communication Skill
Attractive Salary
Kabbur Furnitures
Beside Sultan Diamonds & Gold Showroom
P.B Road, Davanagere.
8951916300

**BUSINESS OPPORTUNITY !**
ಶೂನ್ಯ ಹೂಡಿಕೆಯೊಂದಿಗೆ ವ್ಯಾಪಾರ ಪಾಲುದಾರರನ್ನು ಹುಡುಕಲಾಗುತ್ತಿದೆ
ವಿಶೇಷವಾಗಿ ಜೀವ ವಿಮೆ/ ಸಾಮಾನ್ಯ ವಿಮಾ ಏಜೆಂಟ್‌ಗಳು/ ತೆರಿಗೆ ಸಲಹೆಗಾರರು / ನಿವೃತ್ತ ಬ್ಯಾಂಕ್ ಮ್ಯಾನೇಜರ್‌ಗಳು/ ಪದವೀಧರು/ ಉದ್ಯಮಿಗಳು/ ನಿವೃತ್ತರು/ ಹಿರಿಯ ನಾಗರಿಕರು
ಸಂಪರ್ಕಿಸಿ :
8904270234

**FEMALE STAFF REQUIRED**
Experienced Sales Girl needed for innerwear store.
'womens paradise'
AVK College Road, Dvg.
M : 96204 53208

**ಮನೆ ಬಾಡಿಗೆಗೆ ಇದೆ**
#2043/37 ಎಸ್ ಎಸ್ ಲೇಔಟ್ 'ಬಿ' ಬ್ಲಾಕ್, 1ನೇ ಮಹಡಿ, ಪೂರ್ವ ದಿಕ್ಕಿನ ಮನೆ, 2 BHK, ಬೋರ್‌ವೆಲ್, ಮುನ್ಸಿಪಲ್ ಹಾಗೂ ಕಾರ್ ಪಾರ್ಕಿಂಗ್, ಅಟ್ಯಾಚ್ ಬಾತ್ ರೂಮ್ ವಾಸ್ತು ಪ್ರಕಾರ (ಸಸ್ಯಹಾರಿಗಳಿಗೆ ಮಾತ್ರ )
73492 06165

**HOUSE FOR RENT**
2BHK house,1st floor `Manjushri Nilaya', #3742/B2, 14th Cross, Siddaveerappa Badavane, Near Ayyappa Swamy temple, Davanagere.
94482 33215
Only for Vegetarians

**ಇಂಡಸ್ಟ್ರೀಯಲ್, ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಬಂಬೂಬಜಾರ್ ಪಕ್ಕ, ಬಸಾಪುರ ರಸ್ತೆಯಲ್ಲಿ ಫೈನಲ್ ಅಪ್ರೂವಲ್ ಹಾಗೂ ಡೋ.ನಂಬರ್ ಹೊಂದಿರುವ 2700 ಚ.ಅಡಿ ಕಾರ್ನರ್ ಮತ್ತು 4200 ಅ.ಅಡಿ ಅಳತೆಯ 2 ಸೈಟುಗಳು ಮಾರಾಟಕ್ಕಿವೆ.
98441 88191

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 20-35 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಮನೆ ಮಾರಾಟಕ್ಕೆ ಇದೆ**
ಜೆ.ಹೆಚ್. ಪಟೇಲ್ ನಗರದಲ್ಲಿ ಮನೆ ಮಾರಾಟಕ್ಕೆ ಇದೆ. ಪೂರ್ವ ದಿಕ್ಕಿನ ಮತ್ತು ಸೈಟುಗಳು ಇವೆ.
94482 33389

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ (ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**TEACHERS WANTED**
Shree Taralabalu Educational Institution (R) Sirigere
Shree Taralabalu Nursery And English Medium Higer Primary School - Basapura
21st Ward, Davanagere -577001
B.Sc, B.Ed - 02, BA, B.Ed - 02 (English Major)
Hindi B.Ed - 01, D.Ed, BA - 02
Contcat : 94488 03836
95912 85527, 81977 96810


**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆ ಬಾಡಿಗೆಗೆ/ಭೋಗ್ಯಕ್ಕಿದೆ**
2BHK, 2 BHK
ರಾಜೀವ್ ಗಾಂಧಿ ಬಡಾವಣೆ
ಸಂಪರ್ಕಿಸಿ:
99029 99615
83106 11169

**SITE FOR RENT/LEASE**
80x50 (4000sq feet)
Location: Industrial area, Near NH 4 Davangere.
99022 75853 (Kiran H B)
98452 40951 (Basavaraja H K)

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
5ನೇ ಲಕ್ಕಿ ಡ್ರಾ ವಿನ್ನರ್
406
ಪ್ರಭುದೇವ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಮಳಿಗೆಗಳು ಬಾಡಿಗೆಗಿವೆ**
ಮಂಡಿಪೇಟೆಯ ಒಂದೇ ಕಾಂಪ್ಲೆಕ್ಸ್‌ನಲ್ಲಿ ಮೂರು ಮಳಿಗೆಗಳು ಲಭ್ಯವಿದ್ದು, ಆಸಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ...
ಮಂಡಿಪೇಟೆ, ದಾವಣಗೆರೆ.
96865 51303
99806 29965

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆ 'B' ಬ್ಲಾಕ್‌ನಲ್ಲಿ 30x50 ಪೂರ್ವ 40 ಅಡಿ ರಸ್ತೆಗೆ, 30x40 ಪೂರ್ವ ಶ್ರೀ ಸಾಮಾನ್ಯದಲ್ಲಿ 30x43 40 ಅಡಿ ರಸ್ತೆಗೆ, 30x40 ಉತ್ತರ ಬೈಪಾಸ್ ಸರ್ವಿಸ್ ರಸ್ತೆಗೆ 30x55 (ಕಮರ್ಷಿಯಲ್) ರೋಹನ್ ಗಾರ್ಡನ್‌ನಲ್ಲಿ 30x50 ಉತ್ತರ 3 ಸೈಟ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ : ಸುರೇಶ್ ಪಿ.ಎಸ್.
84314 00907

**ಮನೆ ಬಾಡಿಗೆಗೆ ಇದೆ**
RMC ಮೇನ್ ರೋಡ್, ಬಂಬೂ ಬಜಾರ್ ಮೇನ್ ರೋಡ್, 1ನೇ ಮಹಡಿ, 2 BHK ಮನೆ, ಸೋಲಾರ್, ಬೋರ್ ವೆಲ್/ ಮುನ್ಸಿಪಲ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ. ವಿನಾಯಕ ವೇಬ್ರಿಡ್ಜ್ ಎದುರಿಗೆ
83105 24100

**ಕೆಲಸಕ್ಕೆ ಬೇಕಾಗಿದ್ದಾರೆ**
ಲೇಡಿಸ್-Tally ಮಾರ್ಕೆಟಿಂಗ್ ಸಂಬಳ 9000/-
ಬಾಯ್ಸ್‌ಗೆ ಫೀಲ್ಡ್ ವರ್ಕ್ 14,000/-
ಎಂಸಿಸಿ ಬಿ ಬ್ಲಾಕ್, 5ನೇ ಮೇನ್, 5ನೇ ಕ್ರಾಸ್, ದಾವಣಗೆರೆ.
9591750723, 7899951681

**TEACHERS WANTED**
B.Sc, B.Ed - 6 Posts
BA, B.Ed - 6 Posts
NTC - 4 Posts
Computer - 2 Posts
BPED / CPED - 2 Posts
Contact : SRIS, DCM, Dvg.
80950 08434

**ಮನೆ ಮಾರಾಟಕ್ಕಿದೆ**
3 ಮಳಿಗೆ, 2 BHK, ಗ್ರೌಂಡ್, 1ನೇ ಮಹಡಿ, 2 BHK, 1 BHK 12 ಚದರಡಿವುಳ್ಳ, ಬೋರ್‌ವೆಲ್ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಕರೆ ಮಾಡಬಹುದು
70192 17786, 70191 08442

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

50 1974 2023

ಶನಿವಾರ, ಮೇ 11, 2024

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

☎ 08192 254736 | 91642 99999



## ಬಸವ ಪಥ ನಮ್ಮ ದಾರಿಯಾದಾಗ ಜೀವನದ ಸಮಸ್ಯೆಗಳಿಗೆ ಪರಿಹಾರ ಸಾಧ್ಯ

### ಬಸವ ಜಯಂತಿಯಲ್ಲಿ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಪ್ರತಿಪಾದನೆ

ದಾವಣಗೆರೆ, ಮೇ 10 - ಬಸವ ಪಥ ನಮ್ಮ ದಾರಿಯಾಗಲಿ, ಆಗ ಜೀವನದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಪ್ರತಿಪಾದಿಸಿದರು.

ನಗರದ ವಿರಕ್ತ ಮಠದಲ್ಲಿ ಇಂದು ಏರ್ಪಾಡಾಗಿದ್ದ ವಿಶ್ವಗುರು ಬಸವಣ್ಣನವರ ಜಯಂತಿ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಬಸವಣ್ಣನವರ ವಚನಗಳು ನಮ್ಮ ಬದುಕಿಗೆ ರಾಜಮಾರ್ಗವಾಗಿವೆ. ಅವುಗಳನ್ನು ಅನುಷ್ಠಾನಕ್ಕೆ ತಂದರೆ ಬದುಕು ಸಾರ್ಥಕವಾಗುತ್ತದೆ. ಹಿಂದಿನ ಕಾಲದಿಂದಲೂ ಸ್ವರ್ಗ - ನರಕ ಮೇಲೆ ಕೆಳಗೆ ಇವೆ ಎಂಬ ಮೌಢ್ಯವನ್ನು ಬಿತ್ತಲಾಗಿತ್ತು. ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದೆಡೆ ನರಕ ಎಂದು ಬಸವಣ್ಣನವರು ನಮ್ಮ ನಾಲಿಗೆಯ ಮೇಲೆ ಸ್ವರ್ಗ - ನರಕವನ್ನು ತೋರಿಸಿದ್ದಾರೆ. ಪ್ರೀತಿಯಿಂದ ಬದುಕು ಸಾಗಿದರೆ ಸ್ವರ್ಗ ವಾಗುವುದು. ದ್ವೇಷದ ಜೊತೆಗೆ ಹೋದರೆ ಅದುವೇ ನರಕ. ದೇವರು ಹೊರಗೆ ಇಲ್ಲ ಮಾನವರಲ್ಲಿಯೇ ದೇವರನ್ನು ಕಾಣಬೇಕೆಂದು ಬಸವಣ್ಣನವರು ಹೇಳಿದ್ದಾರೆ. ದೇಹವೇ ದೇಗುಲ ಎಂದರು ದೇಹ ದೇವಾಲಯವಾದರೆ ಜಗಳಕ್ಕೆ ಜಾಗವಿಲ್ಲ. ಅದರಲ್ಲೂ ಪ್ರಪಂಚದಲ್ಲಿ ಮೂರನೇ ಯುದ್ಧವೂ ನಡೆಯಲು ಸಾಧ್ಯವಿಲ್ಲ. ಹಾಗಾಗಿ ವಿಶ್ವದಲ್ಲಿ ಹಾಗೂ ಬದುಕಿನಲ್ಲಿ ಸುಖ, ಶಾಂತಿ ನೆಲೆಸಲು ಬಸವ ತತ್ವ ಇಂದಿನ ಅಗತ್ಯ ಎಂದು ಹೇಳಿದರು.

**ನವಜಾತ ಶಿಶುಗಳಿಗೆ ನಾಮಕರಣ:** ಬಸವ, ಬಸವರಾಜ, ಚನ್ನಬಸವ, ಅಕ್ಕಮಹಾದೇವಿ, ವಚನ, ಜಯದೇವ, ಮೃತ್ಯುಂಜಯ, ದಾನೇಶ್ವರಿ, ಸತ್ಯಕ್ಕ, ಅಲ್ಲಮ, ಪ್ರಭು, ಶಿವಯೋಗಿ, ನೀಲಾಂಬಿಕೆ, ಗಂಗಾಬಿಕೆ, ಅಕ್ಕನಾಗಮ್ಮ, ಪ್ರಭುದೇವ ಹೀಗೆ ಶರಣರ ಹೆಸರನ್ನು ಮಕ್ಕಳಿಗೆ ಇಡಲಾಯಿತು.

ಇದೇ ಸಂದರ್ಭದಲ್ಲಿ ಬಸವ ತತ್ವ ಪ್ರಸಾರ ಮಾಡಲು ತಯಾರಾದ ಯುವಕರಿಗೆ ವಚನಮೂರ್ತಿ ದೀಕ್ಷೆಯನ್ನು (4ನೇ ಪುಟಕ್ಕೆ)

## ಮುಂಗಾರು ವೈಫಲ್ಯ : ಬರ ಪರಿಹಾರಕ್ಕೆ ನೀತಿ ಸಂಹಿತೆ ವಿನಾಯಿತಿ ನೀಡಬೇಕು

ಬೆಂಗಳೂರು, ಮೇ 10 - ಬರ ಹಾಗೂ ಕುಡಿಯುವ ನೀರು ನಿರ್ವಹಣೆ ಕುರಿತು ಸಭೆ ನಡೆಸಿ ಪರಿಹಾರ ಕ್ರಮ ಕೈಗೊಳ್ಳಲು ಮಾದರಿ ನೀತಿ ಸಂಹಿತೆಯಿಂದ ವಿನಾಯಿತಿ ನೀಡುವಂತೆ ರಾಜ್ಯ ಸರ್ಕಾರ ಮುಖ್ಯ ಚುನಾವಣಾಧಿಕಾರಿಗಳನ್ನು ಕೋರಿದೆ.

ಕರ್ನಾಟಕದಲ್ಲಿ ಕಳೆದ ಮುಂಗಾರು ಮತ್ತು ಹಿಂಗಾರು ಮಳೆ ವೈಫಲ್ಯದಿಂದ 223 ತಾಲ್ಲೂಕುಗಳು ಬರ ಪೀಡಿತಗೊಂಡು ಕುಡಿಯುವ ನೀರು ಮತ್ತು ಮೇವಿಗೆ ಸಮಸ್ಯೆ ಉಂಟಾಗಿದೆ.

ಪ್ರಸಕ್ತ ಸಾಲಿನಲ್ಲೂ ನಿರೀಕ್ಷೆಯಂತೆ ಮಳೆ ಬಂದಿಲ್ಲ, ಈ ಕಾರಣದಿಂದ ಸಮಸ್ಯೆ ಇರುವ ಕಡೆ ಪರಿಹಾರ ಕೈಗೊಳ್ಳುವ ಹೊಣೆ ಸರ್ಕಾರದ್ದಾಗಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಚುನಾವಣೆ ಪೂರ್ಣಗೊಂಡಿದೆ. ಆದರೆ, ಜೂನ್ 6ರವರೆಗೂ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ.

**ಚುನಾವಣಾಧಿಕಾರಿಗಳಿಗೆ ಸರ್ಕಾರದ ಮನವಿ**

ನಮ್ಮಲ್ಲಿ ಚುನಾವಣೆಯ ಮತದಾನ ಪೂರ್ಣಗೊಂಡಿರುವುದರಿಂದ ಈ ತುರ್ತು ವಿಷಯಕ್ಕೆ ಮಾತ್ರ ನೀತಿ ಸಂಹಿತೆ ಸಡಿಲಿಸಿ ಪರಿಹಾರ ಕಾರ್ಯಕೈಗೊಳ್ಳಲು ಅವಕಾಶ ಮಾಡಿಕೊಡಿ ಎಂದು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಅವರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.

ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೊಂಡ ನಂತರ ನಾವು ಯಾವುದೇ ಅಭಿವೃದ್ಧಿ ಮತ್ತು ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ.

ಜಿಲ್ಲಾಡಳಿತಗಳು ಚುನಾವಣಾ ಪ್ರಕ್ರಿಯೆಯಲ್ಲಿ ಮಗ್ನವಾಗಿದ್ದವು, ಇಂತಹ ಸಂದರ್ಭದಲ್ಲಿ ಕೆಲವೆಡೆ ಸಮಸ್ಯೆಗಳು ಎದುರಾಗಿವೆ, ಆದರೆ, ನಾವು ಮಧ್ಯ ಪ್ರವೇಶ ಮಾಡುವಂತಿಲ್ಲ.

ಬರ ಪರಿಹಾರ ನಿರ್ವಹಣೆಗೆ ಹಣದ ಕೊರತೆ ಇಲ್ಲ, ಈಗಾಗಲೇ ಜಿಲ್ಲಾಡಳಿತದ ಬಳಿಯೂ ಸಾಕಷ್ಟು ಹಣವಿದೆ, ಪರಿಹಾರ ಕಾಮಗಾರಿಗಳನ್ನಷ್ಟೇ ಕೈಗೊಳ್ಳಬೇಕು.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ಪ್ರಸಕ್ತ ವರ್ಷವೂ ಮುಂಗಾರು ವಿಳಂಬವಾಗುವ ವರದಿ ನೀಡಿರುತ್ತಾರೆ, ಈಗಾಗಲೇ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿರುತ್ತದೆ. ಮುಂದಿನ ಎರಡು ತಿಂಗಳವರೆಗೆ ಜನರು ಹಾಗೂ ಜಾನುವಾರುಗಳಿಗೆ ಶುದ್ಧ ಹಾಗೂ ಸಮರ್ಪಕ ಕುಡಿಯುವ ನೀರಿನ ನಿರ್ವಹಣೆ ಅತ್ಯವಶ್ಯಕವಾಗಿರುತ್ತದೆ. (4ನೇ ಪುಟಕ್ಕೆ)

## ದೇವರಾಜೇಗೌಡ ವಿರುದ್ಧ ಲೈಂಗಿಕ ಪೀಡನೆ ಪ್ರಕರಣ

ಬೆಂಗಳೂರು, ಮೇ 10 – ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಪೀಡನೆ ಆರೋಪದ ಬಗ್ಗೆ ಬಿಜೆಪಿ ನಾಯಕತ್ವಕ್ಕೆ ಪತ್ರ ಬರೆದಿದ್ದ ಜಿ. ದೇವರಾಜೇಗೌಡ ವಿರುದ್ಧ ಲೈಂಗಿಕ ಪೀಡನೆ ಪ್ರಕರಣವೊಂದನ್ನು ದಾಖಲಿಸಲಾಗಿದೆ.

ದೇವರಾಜೇಗೌಡ ವಿರುದ್ಧ ಏಪ್ರಿಲ್ 1ರಂದೇ ಎಫ್.ಐ.ಆರ್. ದಾಖಲಿಸಲಾಗಿತ್ತು. ಪ್ರಜ್ವಲ್ ರೇವಣ್ಣ ಪ್ರಕರಣ ಬೆಳಕಿಗೆ ಬ ಂದ ನಂತರ, ಗೌಡ ವಿರುದ್ಧದ ಪ್ರಕರಣವೂ ಬೆಳಕಿಗೆ ಬಂದಿದೆ.

ದೇವರಾಜೇಗೌಡ ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ನಾಯಕ ಹಾಗೂ ಪ್ರಜ್ವಲ್ ತಂದೆ ಹೆಚ್.ಡಿ. ರೇವಣ್ಣ ವಿರುದ್ಧ (4ನೇ ಪುಟಕ್ಕೆ)

## ಚುನಾವಣಾ ಪ್ರಚಾರಕ್ಕೆ ಮುಖ್ಯಮಂತ್ರಿ ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು



ನವದೆಹಲಿ, ಮೇ 10 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ಆದರೆ, ಕೇಜ್ರಿವಾಲ್ ತಮ್ಮ ಕಚೇರಿಗೆ ಇಲ್ಲವೇ ದೆಹಲಿ ಕಾರ್ಯಾಲಯಕ್ಕೆ ಭೇಟಿ ನೀಡಬಾರದು ಹಾಗೂ ಲೆಫ್ಟಿನೆಂಟ್ ಗವರ್ನರ್ ಅನುಮತಿ ಇಲ್ಲದೇ ಯಾವುದೇ ಕಡತಕ್ಕೆ ಸಹಿ ಹಾಕಬಾರದು ಎಂದು ತಿಳಿಸಿದೆ.

ಚುನಾವಣಾ ಪ್ರಚಾರ ಮಾಡಲು ಅವರಿಗೆ 21 ದಿನಗಳ ಮಧ್ಯಂತರ ಜಾಮೀನು ನೀಡಲಾಗಿದೆ. ಕಳೆದ 50 ದಿನಗಳಿಂದ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್ ಕಸ್ಟಡಿಯಲ್ಲಿದ್ದರು. ಏಳು ಹಂತದ ಚುನಾವಣೆ ಪೂರ್ಣಗೊಂಡ ನಂತರ ಜೂನ್ 2ರಂದು ಅವರು ನ್ಯಾಯಾಲಯಕ್ಕೆ ಶರಣಾಗಬೇಕು ಎಂದು ತಿಳಿಸಲಾಗಿದೆ.

ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿದ ನಂತರ ಐ.ಎನ್. (4ನೇ ಪುಟಕ್ಕೆ)

## ಆರು ಕುಸ್ತಿ ಪಟುಗಳಿಗೆ ಲೈಂಗಿಕ ಪೀಡನೆ ಆರೋಪ

ನವದೆಹಲಿ, ಮೇ 10 – ಆರು ಮಹಿಳಾ ಕುಸ್ತಿ ಪಟುಗಳನ್ನು ಲೈಂಗಿಕವಾಗಿ ಪೀಡಿಸಿದ ಆರೋಪಕ್ಕೆ ಸಾಕಷ್ಟು ಸಾಕ್ಷಿಗಳಿವೆ ಎಂದು ಹೇಳಿರುವ ದೆಹಲಿ ನ್ಯಾಯಾಲಯ, ಬಿಜೆಪಿ ಸಂಸದ ಹಾಗೂ ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಆರೋಪ ಪಟ್ಟಿ ದಾಖಲಿಸಲು ಆದೇಶ ನೀಡಿದೆ.

ಐ.ಪಿ.ಸಿ. ಸೆಕ್ಷನ್‌ಗಳಾದ 354, 354 ಎ ಹಾಗೂ 506 ಅನ್ವಯ ಆರೋಪ ಪಟ್ಟಿ ದಾಖಲಿಸುವಂತೆ ದೆಹಲಿಯ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಿಯಾಂಕ ರಾಜಪೂತ್ ಆದೇಶಿಸಿದ್ದಾರೆ.

**ಬ್ರಿಜ್ ಭೂಷಣ್ ವಿರುದ್ಧ ಆರೋಪ ಪಟ್ಟಿಗೆ ಆದೇಶ**

ಆದರೆ, ಆರು ಕ್ರೀಡಾಪಟುಗಳ ಪೈಕಿ ಒಬ್ಬರು ನೀಡಿರುವ ದೂರಿನಲ್ಲಿ ಸಮರ್ಪಕ ಸಾಕ್ಷಿಗಳಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಪ್ರಕರಣದ ಇಬ್ಬರು ಸಹ ಆರೋಪಿಗಳು ಹಾಗೂ ಕುಸ್ತಿ ಒಕ್ಕೂಟದ ಮಾಜಿ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ವಿರುದ್ಧವೂ ಪ್ರಕರಣ ದಾಖಲಿಸುವಂತೆಯೂ ನ್ಯಾಯಾಲಯ ಆದೇಶಿಸಿದೆ. ಮೇ 21ರಂದು ಔಪಚಾರಿಕವಾಗಿ ಆರೋಪ ಪಟ್ಟಿ ದಾಖಲಿಸಲಾಗುವುದು.

ಈ ಬಗ್ಗೆ ಪ್ರತಿಕ್ರಿಯಿಸಿರುವ (4ನೇ ಪುಟಕ್ಕೆ)

## ಶ್ವೇತಾ ಮಿಸ್ಸೆಸ್ ಕರ್ನಾಟಕ ಮಾಡೆಲ್ ಪ್ರಶಸ್ತಿ



ದಾವಣಗೆರೆ, ಮೇ 10 - ನಗರದ ಸ್ವಾಮಿ ವಿವೇಕಾನಂದ ಬಡಾವಣೆಯ ಮಹಿಳಾ ಕಾಂಗ್ರೆಸ್ ಮುಖಂಡರಾದ ಶ್ರೀಮತಿ ಶ್ವೇತಾ ಪಾಟೀಲ್ ಮಿಸ್ಸೆಸ್ ಕರ್ನಾಟಕ ಮಾಡೆಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ವಿಂಗ್ಸ್ ಫ್ಯಾಷನ್ ಇವೆಂಟ್ಸ್ ಕಳೆದ ವಾರ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಸ್ಥಳೀಯವಾಗಿ ಮಿಸ್ಸೆಸ್‌ನ ದಾವಣಗೆರೆ ಆಗಿ ಆಯ್ಕೆಯಾಗಿ ತುಮಕೂರಿನಲ್ಲಿ ನಡೆದ ಸ್ಪರ್ಧೆಯಲ್ಲಿ ಮಿಸ್ಸೆಸ್ ಕರ್ನಾಟಕ ಮಾಡೆಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.


ಶ್ರೀಮತಿ ಶ್ವೇತಾ, ನಗರದ ಸಂಜೀವಿನಿ ಪ್ಯಾರಾಮೆಡಿಕಲ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾಗಿದ್ದಾರೆ. ತಾಯಿ ಶ್ರೀಮತಿ ಲೀಲಾವತಿ ಆರ್.ಎಚ್. ಹಾಗೂ ಪತಿ ಸಂತೋಷ ಪಾಟೀಲ್ ಮತ್ತು ಸ್ನೇಹಿತರಾದ ಗಾಯತ್ರಿ, ವೀಣಾ, ದೇವಿಕಾ ಅವರ ಪ್ರೋತ್ಸಾಹದಿಂದ (4ನೇ ಪುಟಕ್ಕೆ)

## ಅಕ್ರಮ ಹಣ ಪ್ರಕರಣ : ಕವಿತಾ ವಿರುದ್ಧ ಹೊಸ ಆರೋಪ ಪಟ್ಟಿ

ನವದೆಹಲಿ, ಮೇ 10 – ದೆಹಲಿ ಅಬಕಾರಿ ನೀತಿಯ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಬಿ.ಆರ್.ಎಸ್. ನಾಯಕಿ ಕೆ.ಕವಿತಾ ಅವರನ್ನು ಆರೋಪಿಯಾಗಿ ಹೆಸರಿಸುವ ಹೊಸ ಆರೋಪ ಪಟ್ಟಿ ದಾಖಲಿಸಿದೆ.

ಕವಿತಾ ಅವರನ್ನು ಚುನಾವಣಾ ಆಯೋಗ ಕಳೆದ ಮಾರ್ಚ್ 15ರಂದು ಬಂಧಿಸಿತ್ತು. ಅಕ್ರಮ ಹಣ ತಡೆ ಕಾಯ್ದೆಯ ಅನ್ವಯ ಹೊಸ (4ನೇ ಪುಟಕ್ಕೆ)

## ಅಕ್ಷಯ ತೃತೀಯಕ್ಕೆ ತಟ್ಟದ ಬೆಲೆ ಏರಿಕೆ ಬಿಸಿ ಬಂಗಾರ, ಆಭರಣಗಳ ಬೇಡಿಕೆ ಏರುಮುಖ



ಮುಂಬೈ, ಮೇ 10 – ಬಂಗಾರದ ಬೆಲೆ ಗಗನಮುಖಿಯಾಗಿದ್ದರೂ ಸಹ, ಅಕ್ಷಯ ತೃತೀಯ ದಿನದಂದು ಬಂಗಾರ ಹಾಗೂ ಬಂಗಾರದ ಆಭರಣಗಳ ಬೇಡಿಕೆ ಹೆಚ್ಚಿನ ಮಟ್ಟದಲ್ಲೇ ಕಂಡು ಬಂದಿದೆ.

ಅಕ್ಷಯ ತೃತೀಯ ದಿನದಂದು ಬಂಗಾರದ ಖರೀದಿ ಶುಭಕರ ಎಂಬ ಭಾವನೆ ಇದೆ. ಇದರಿಂದಾಗಿ ಈ ದಿನದಂದು ಬಂಗಾರದ ಬೇಡಿಕೆ ಹೆಚ್ಚಾಗಿದೆ ಎಂದು ಆಲ್ ಇಂಡಿಯಾ ಜೆಮ್ ಅಂಡ್ ಜ್ಯೂವೆಲರಿ ಡೊಮೆಸ್ಟಿಕ್ ಕೌನ್ಸಿಲ್ ಅಧ್ಯಕ್ಷ ಸೈಯಾಮ್ ಮೆಹ್ರ ತಿಳಿಸಿದ್ದಾರೆ.

ಆದರೆ, ಗುರುವಾರದಂದು ಬಂಗಾರದ ಬೆಲೆ ಪ್ರತಿ ಹತ್ತು ಗ್ರಾಂಗೆ 800 ರೂ. ಹೆಚ್ಚಾಗಿತ್ತು. ಹೀಗಾಗಿ ಬಂಗಾರದ ಮಾರಾಟ ಪ್ರಮಾಣ ಶೇ.5-7ರಷ್ಟು ಕಡಿಮೆಯಾಗಬಹುದು ಎಂದು ಮೆಹ್ರ ಹೇಳಿದ್ದಾರೆ.

ಶುಕ್ರವಾರದಂದು ಬಂಗಾರದ ಬೆಲೆ 10 ಗ್ರಾಂಗಳಿಗೆ 71 ಸಾವಿರ ರೂ.ಗಳಿಗೂ ಹೆಚ್ಚಾಗಿತ್ತು. ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಬಂಗಾರದ ಬೆಲೆ 60 ಸಾವಿರ ರೂ.ಗಳಷ್ಟಿತ್ತು. ವರ್ಷದಲ್ಲೇ ಬಂಗಾರದ ಬೆಲೆ ಶೇ.15-17ರಷ್ಟು ಹೆಚ್ಚಾಗಿದೆ. ದಕ್ಷಿಣ ಭಾರತದಲ್ಲಿ ಮದುವೆಯ ಆಭರಣಗಳಂತಹ ತೂಕದ ಬಂಗಾರದ ಆಭರಣಗಳ ಬೇಡಿಕೆ ಹೆಚ್ಚಾಗಿದೆ. (4ನೇ ಪುಟಕ್ಕೆ)

## ಜಗಳೂರು ತಾ.ಗೆ ಶೇ.70 ರಷ್ಟು ಎಸ್ಸೆಸ್ಸೆಲ್ಸಿ ಫಲಿತಾಂಶ, ಜಿಲ್ಲೆಗೆ 4ನೇ ಸ್ಥಾನಕ್ಕೆ ಕುಸಿತ

ಜಗಳೂರು, ಮೇ 10- ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ತಾಲ್ಲೂಕಿನಲ್ಲಿ ಶೇ.70 ಫಲಿತಾಂಶದೊಂದಿಗೆ ಜಿಲ್ಲೆಗೆ 4ನೇ ಸ್ಥಾನ ಪಡೆದಿದೆ.

ತಾಲ್ಲೂಕಿನಲ್ಲಿ ಗಂಡು 1134, ಹೆಣ್ಣು 1187 ಸೇರಿದಂತೆ ಒಟ್ಟು 2321 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಗಂಡು 699 (ಶೇ.61.64), ಹೆಣ್ಣು 926 (ಶೇ. 78.1) ಸೇರಿದಂತೆ ಒಟ್ಟು 1625 ಸರಾಸರಿ ಶೇ.70.1 ವಿದ್ಯಾರ್ಥಿಗಳು ಪಾಸಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿನಿಯರೇ ಮೇಲುಗೈಸಾಧಿಸಿದ್ದಾರೆ.

**ಮೂರು ಶಾಲೆಗಳು ಶೇ. 100 ರಷ್ಟು ಫಲಿತಾಂಶ :** ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆ ಮುಗ್ಗಿದರಾಗಿಹಳ್ಳಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿಯುತ ಶಾಲೆ ಉದ್ದಗಟ್ಟ, ರೂರಲ್ ಪಬ್ಲಿಕ್ ಶಾಲೆ ದಿದ್ದಿಗೆ, ಶೇ.100 ರಷ್ಟು ಫಲಿತಾಂಶ ಪಡೆದಿವೆ. ಅಂತೆಯೇ ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕಗಳನ್ನು 50 ವಿದ್ಯಾರ್ಥಿಗಳು ಗಳಿಸಿದ್ದಾರೆ ಎಂದು ಬಿಇಓ ಹಾಲಮೂರ್ತಿ ತಿಳಿಸಿದ್ದಾರೆ.

ಕಳೆದ 5 ವರ್ಷಗಳಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶದಲ್ಲಿ ಜಿಲ್ಲೆಗೆ ಪ್ರಥಮಸ್ಥಾನ ಗಳಿಸಿದ್ದ ತಾಲ್ಲೂಕಿನಲ್ಲಿ ಈ ಬಾರಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಕುಸಿತಗೊಂಡಿದೆ. ಪಾರದರ್ಶಕವಾಗಿ ಪರೀಕ್ಷೆ ಸಿಸಿ ಕ್ಯಾಮೇರಾ ಕಣ್ಗಾವಲಿನಲ್ಲಿ ಬಿಗಿ ಬಂದೋಬಸ್ತ್‌ನಿಂದ ನಡೆಸಲಾಗಿದೆ. (4ನೇ ಪುಟಕ್ಕೆ)

## ಅಸಮಾನತೆಯನ್ನು ಧಿಕ್ಕರಿಸಿ ಮಹಿಳೆಯರನ್ನು ಮುಂಚೂಣಿಗೆ ತಂದಿದ್ದು ವಿಶ್ವಗುರು ಬಸವಣ್ಣ

### ಬಸವ ಜಯಂತಿಯಲ್ಲಿ ವೀರಶೈವ ಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ



ದಾವಣಗೆರೆ, ಮೇ 10 - ತನ್ನ ಮನೆಯಿಂದಲೇ ಅಸಮಾನತೆಯನ್ನು ವಿರೋಧಿಸಿ ಇಡೀ ವಿಶ್ವದಲ್ಲೇ ಅಸಮಾನತೆ ವಿರೋಧಿಸಿದವರಲ್ಲಿ ಬಸವಣ್ಣನವರು ಮೊದಲಿಗರಾಗಿದ್ದು, 12ನೇ ಶತಮಾನದಲ್ಲೇ ಸಾಂಸ್ಕೃತಿಕ ನಾಯಕರಾಗಿ ಕೆಲಸ ಮಾಡಿದವರು ಎಂದು ಹಿರಿಯ ಶಾಸಕರೂ, ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಶಾಮನೂರು ಶಿವಶಂಕರಪ್ಪ ಹೇಳಿದರು.

ಜಿಲ್ಲಾ ವೀರಶೈವ-ಲಿಂಗಾಯಿತ ಮಹಾಸಭಾದ ವತಿಯಿಂದ ನಗರದ ಎಂ.ಬಿ.ಎ. ಕಾಲೇಜು ಆವರಣದ ಮಹಾಸಭಾದ ಕಛೇರಿಯಲ್ಲಿ ಇಂದು ಹಮ್ಮಿಕೊಂಡಿದ್ದ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಅಸಮಾನತೆಯನ್ನು ಧಿಕ್ಕರಿಸಿ ಲಿಂಗಾಯಿತ ಧರ್ಮದ ಮೂಲಕ ಮಹಿಳೆಯರನ್ನು ಮುಂಚೂಣಿಗೆ ಬರುವಂತೆ ಮಾಡಿದ ಬಸವಣ್ಣನವರನ್ನು ಕರ್ನಾಟಕ ಸರ್ಕಾರ ಅಧಿಕೃತವಾಗಿ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ್ದು, ಆದರೆ ಅವರು ಅಂದೇ ಸಾಂಸ್ಕೃತಿಕ ನಾಯಕರಾಗಿದ್ದವರು ಎಂದು ಎಸ್ಸೆಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಹೋಟೆಲ್ ಉದ್ಯಮಿಯೂ ಆಗಿರುವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ರಾಜಣ್ಣ ಮಾತನಾಡಿ, 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ಎಲ್ಲಾ ಜಾತಿ ವರ್ಗದವರಿಗೂ ಮನ್ನಣೆ ನೀಡಿ ಪ್ರಜಾಪ್ರಭುತ್ವ ಸ್ಥಾಪಿಸಿದರು ಎಂದರು.

ಹಿರಿಯ ಕೈಗಾರಿಕೋದ್ಯಮಿಯೂ ಆಗಿರುವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ಎಸ್. ವೀರಣ್ಣ ಅವರು ಮಾತನಾಡಿ, ಮಹಾಸಭಾಕ್ಕೆ ನಗರದಲ್ಲಿ ನೀಡಿರುವ ನಿವೇಶನದಲ್ಲಿ ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಐಗೂರು ಸಿ. ಚಂದ್ರಶೇಖರ್, ಕರೇಶಿವಪ್ಪರ ಸಿದ್ದೇಶ್, ಬಿ.ಜೆ. ರಮೇಶ್, ಪ್ರಕಾಶ್ ಪಾಟೀಲ್, ಶಂಭು ಉರೇಕೊಂಡಿ, ಶ್ರೀಮತಿ ಗೀತಾ ಚಂದ್ರಶೇಖರ್, ರಾಜೇಶ್ವರಿ, ನಿರ್ಮಲಾ ಸುಭಾಷ್, ಶುಭಮಂಗಳ, ಶಶಿಕಲಾಮೂರ್ತಿ, ಕೊರಟಗೆರೆ ಶಿವಕುಮಾರ್, ಯಶೋಧ, (2ನೇ ಪುಟಕ್ಕೆ)

## ವ್ಯಕ್ತಿ ಶಕುನಿಯಾದರೆ ಸಮಾಜ ಒಡೆಯುತ್ತೆ, ವೀರಭದ್ರನಾದರೆ ಸಮಾಜ ಗಟ್ಟಿಯಾಗುತ್ತದೆ

### ಮಲೇಬೆನ್ನೂರಿನ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಸ್ವಾಮೀಜಿ ವಿಶ್ಲೇಷಣೆ



ಮಲೇಬೆನ್ನೂರು, ಮೇ 10- ಮನುಷ್ಯ ವಿಜ್ಞಾನ ಯುಗದಲ್ಲಿ ಆಧುನಿಕ ಸೌಲಭ್ಯ ಅನುಭವಿಸಿದರೂ ಮಾನಸಿಕವಾಗಿ ಶಾಂತಿ, ನೆಮ್ಮದಿ ಮಾತ್ರ ಸಿಗುತ್ತಿಲ್ಲ ಎಂದು ರಂಭಾಪುರಿ ಪೀಠದ ಡಾ. ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಉದಾಹರಣೆ ಸಹಿತ ಪ್ರತಿಪಾದಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ದೇವಸ್ಥಾನದ 3ನೇ ವರ್ಷದ ವಾರ್ಷಿಕೋತ್ಸವ ಹಾಗೂ ಮಹಾರುದ್ರ ಯಾಗದ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆ ನೆರವೇರಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮನುಷ್ಯನಿಗೆ ಅಧಿಕಾರ ಭೌತಿಕ ಸಂಪತ್ತು ಇದ್ದರೂ ಸಹ ಸಾಮರಸ್ಯದ ಕೊರತೆ ಎಲ್ಲಾ ರಂಗದಲ್ಲೂ ಎದ್ದು ಕಾಣುತ್ತಿದೆ. ಹಿಂದಿನ ಋಷಿಮುನಿಗಳ ಧರ್ಮದ ಹಾದಿ ಪ್ರಸ್ತುತ ಅಧರ್ಮದ ದಾರಿಯಾಗಿದ್ದು, ನೆಮ್ಮದಿಯ ದಾರಿ ಮರಿಚೀಕೆ ಆಗಿದೆ ಎಂದು ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ ಆಗಬೇಕು. ಸತ್ಯ ಉಳಿಯಬೇಕು ಸಜ್ಜನರು ಹೆಚ್ಚಾಗಬೇಕು. ದುರ್ಜನರು ಅಳಿಯಬೇಕು. ಮನುಕುಲದ ಕಲ್ಯಾಣ ನಮ್ಮೆಲ್ಲರ ಗುರಿ ಆಗಬೇಕೆಂದು ಸ್ವಾಮೀಜಿ ಹೇಳಿದರು.

ಭಾರತದ ಸನಾತನ ಸಂಸ್ಕೃತಿಯಲ್ಲಿ ಅಕ್ಷಯ ತೃತೀಯಕ್ಕೆ 'ಸಾಡೇ ತೀನ್ (ಮೂರುವರೆ) ಮಹೂರ್ತ' ಎನ್ನಲಾಗುತ್ತಿದೆ. ಅರಿಷಡ್ವರ್ಗದ ಧರ್ಮ ಪಾಲಿಸಿದರೆ ಮಾತ್ರ ಮೋಕ್ಷ ಪ್ರಾಪ್ತಿ, ಎಲ್ಲೆಡೆ ಶಾಂತಿ, ನೆಮ್ಮದಿ ನೆಲೆಗೊಳ್ಳಬೇಕು. ವಿದೇಶಿಯರು ಭಾರತದ ಪರಂಪರೆ, ಧರ್ಮ, ಆಧ್ಯಾತ್ಮ, ವೇದಗಳನ್ನು ಕಲಿಯುತ್ತಿದ್ದಾರೆ. ಆದರೆ, ಭಾರತೀಯರು ಇವೆಲ್ಲವನ್ನೂ ನಿರ್ಲಕ್ಷಿಸಿ ಕಾಲಹರಣ, ಮೋಜು ಮಸ್ತಿ ಮಾಡುತ್ತಿದ್ದಾರೆ. ದೇವಾಲಯ, ಮಠ ಮಾನ್ಯ, ಗುರುಹಿರಿಯರನ್ನು ನಿರ್ಲಕ್ಷ ಮಾಡಿದ್ದಾರೆ. ಭರತ ಭೂಮಿಯಲ್ಲಿ ಧರ್ಮಕ್ಕೆ ವಿಶಿಷ್ಠ ಸ್ಥಾನಮಾನವಿದೆ ಎನ್ನುವುದನ್ನು ಮರೆತಿದ್ದಾರೆ ಎಂದು ಸ್ವಾಮೀಜಿ ಖೇದ ವ್ಯಕ್ತಪಡಿಸಿದರು.

ವ್ಯಕ್ತಿ ಶಕುನಿಯಾದರೆ ಸಮಾಜ ಒಡೆಯುತ್ತದೆ, ವೀರಭದ್ರನಾದರೆ ಸಮಾಜ ಗಟ್ಟಿಯಾಗುತ್ತದೆ ಎಂದು ಎಚ್ಚರಿಸಿದ ಸ್ವಾಮೀಜಿ, ಕಳೆದ ಒಂದು ವಾರದಿಂದ ಟಿವಿಯಲ್ಲಿ ಬರುತ್ತಿರುವ ದೃಶ್ಯಗಳು, ಮಾತುಗಳು ಸಜ್ಜನರಿಗೆ ನೋವುಂಟು ಮಾಡುತ್ತಿವೆ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು.

ಬೆಂಗಳೂರಿನ ವಿದ್ವಾಂಸ ರಂಗನಾಥ್ ಅವರು ವೇದದಲ್ಲಿ ರುದ್ರ ಪಾರಾಯಣ, ರುದ್ರಾಧ್ಯಾಯ ರುದ್ರಯಾಗದ ಕುರಿತು ಉಪನ್ಯಾಸ ನೀಡಿದರು.

ದೇವಾಲಯದಲ್ಲಿ ಗುರುರೇಣುಕರ ಪ್ರತ್ಥಳಿಯನ್ನು ರಂಭಾಪುರಿ ಜಗದ್ಗುರುಗಳು ಈ ವೇಳೆ ಅನಾವರಣ ಮಾಡಿದರು. (4ನೇ ಪುಟಕ್ಕೆ)

## ನಗರದಲ್ಲಿ ಇಂದು ಕನ್ಯಕಾಪರಮೇಶ್ವರಿಗೆ ಪೂಜೆ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ವಾಸವಿ ಪೂಜಾ ವಿಧಾನದ ಹಾಡುಗಳೊಂದಿಗೆ ದೇವಿಗೆ ಪೂಜೆ ನೆರವೇರಲಿದೆ ಎಂದು ಶ್ರೀ ಕನ್ಯಕಾಪರಮೇಶ್ವರಿ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ತಿಳಿಸಿದ್ದಾರೆ.

## ಎಲೆಬೇತೂರಿನಲ್ಲಿ ಸಾಂಸ್ಕೃತಿಕ ನಾಯಕನ ಪುತ್ಥಳಿ ಅನಾವರಣ



ದಾವಣಗೆರೆ, ಮೇ.10- ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ಗ್ರಾಮದ ಬಸವೇಶ್ವರ ವೃತ್ತದಲ್ಲಿ ಸಾಂಸ್ಕೃತಿಕ ನಾಯಕ ಹಾಗೂ ವಿಶ್ವಗುರು ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಯಿತು.

ಪುತ್ಥಳಿಯನ್ನು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ವಿವಿಧ ಕಲಾ ತಂಡಗಳಾದ ವೀರಗಾಸೆ, ಸಮಾಳದೊಂದಿಗೆ ಮೆರವಣಿಗೆ ಮಾಡಲಾಯಿತು. ಬಸವೇಶ್ವರ ಯುವಕ ಸಂಘ ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

## ನಾಳೆ ಮರುಳಸಿದ್ದೇಶ್ವರ ಜಾತ್ರೆ



ಕೊಟ್ಟೂರು, ಮೇ 10 - ತಾಲ್ಲೂಕಿನ ಉಜ್ಜಿನಿ ಗ್ರಾಮದ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಾಡಿದ್ದು ದಿನಾಂಕ 12 ಮತ್ತು 13 ರಂದು ಜರುಗಲಿದೆ ಎಂದು ಉಜ್ಜಯಿನಿ ಪೀಠದ ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾ ಸ್ವಾಮೀಜಿ ತಿಳಿಸಿದ್ದಾರೆ.

ರಾಜ್ಯಾದ್ಯಂತ ಶ್ರೀ ಪೀಠಕ್ಕೆ ಇರುವ ಸಹಸ್ರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾಗಲಿದ್ದಾರೆ ಹಾಗೂ ರಥೋತ್ಸವ ದಿನ ಹಾಗೂ ಮರು ದಿನದಂದು ಸಕಲ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆಯೂ ಸಹ ಇರುತ್ತದೆ.

ಇದರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮ, ಸಾಮೂಹಿಕ ವಿವಾಹಗಳು ಸೇರಿದಂತೆ ಧಾರ್ಮಿಕ ಕಾರ್ಯಗಳು ನಡೆಯುತ್ತವೆ ಎಂದು ತಿಳಿಸಿದ್ದಾರೆ.

ರಾಜ್ಯದಾದ್ಯಂತ ಹೆಸರು ವಾಸಿಯಾದ ಶಿಖರ ತೈಲಾಭಿಷೇಕ ನಡೆಯುವುದು ಉಜ್ಜಯಿನಿ ಪೀಠದ ವಿಶೇಷತೆಯಾಗಿದೆ. ಇದನ್ನು ಕಣ್ತುಂಬಿಕೊಳ್ಳಲು ರಥೋತ್ಸವಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ತೈಲಾಭೀಷೇಕ ವೀಕ್ಷಣೆಗೆ ಬರುತ್ತಾರೆ.

ಇದಕ್ಕೆ ಒಂದು ಐತಿಹ್ಯವಿದೆ. ಜರ್ಮಲಿ ಪಾಳೆಗಾರರಿಂದ ತಂದ ತೈಲವನ್ನು ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಶಿಖರಕ್ಕೆ ಅರ್ಪಿಸಲಾಗುತ್ತದೆ. ನಂತರ ಭಕ್ತಾಧಿಗಳು ತಂದಿರುವ ತೈಲವನ್ನು ಎರೆಯಲಾಗುತ್ತದೆ.

ತೈಲಾಭಿಷೇಕಕ್ಕೆ ಆಗಮಿಸುವ ಭಕ್ತಾದಿಗಳಿಗೆ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಒಳಿತನ್ನುಂಟು ಮಾಡಲಿ. ಈ ವರ್ಷ ಮಳೆ, ಬೆಳೆ ಸಮೃದ್ಧಿಯಾಗಿ ಸಕಲರಿಗೂ ಒಳಿತಾಗಲಿ ಎಂದು ಶ್ರೀಗಳು ಹಾರೈಸಿದರು.


## ಎಸ್ಸೆಸ್ಸೆಲ್ಸಿ : ಟಿ.ಎಸ್. ಆದಿತ್ಯಗೆ ಶೇ. 95.04



ಮೈಸೂರಿನ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿ ಟಿ.ಎಸ್. ಆದಿತ್ಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 594 (ಶೇ. 95.04) ಅಂಕ ಗಳಿಸಿದ್ದಾನೆ. ಆದಿತ್ಯ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷರಾದ ಟಿ.ಎಸ್. ಜಯರುದ್ರೇಶ್ ಅವರ ಸಹೋದರ ಟಿ.ಎಸ್. ಸಿದ್ದಲಿಂಗೇಶ್ ಹಾಗೂ ಶ್ರೀಮತಿ ದೀಪಾ ದಂಪತಿ ಪುತ್ರ.

ಶುಭ ಕೋರುವವರು : ಸಿಬ್ಬಂದಿ ವರ್ಗ, ನಂದಿ ಪೆಟ್ರೋಲ್ ಬಂಕ್, ದಾವಣಗೆರೆ.


## 15ರಿಂದ ಗೀತ ಗಾಯನ ತರಬೇತಿ



ದಾವಣಗೆರೆ, ಮೇ 10 - ಸುಶ್ರಾವ್ಯ ಸಂಗೀತ ವಿದ್ಯಾಲಯದ ವತಿಯಿಂದ ನಗರದ ತರಳಬಾಳು ಬಡಾವಣೆಯ ನಮನದಲ್ಲಿ 'ನಿನಾದ-9' ಗೀತ ಗಾಯನ ತರಬೇತಿ ಶಿಬಿರವನ್ನು ಇದೇ ದಿನಾಂಕ 15 ರಿಂದ 19ರವರೆಗೆ ಹಮ್ಮಿಕೊಳ್ಳಲಾಗಿದೆ.

ಈ ಶಿಬಿರದಲ್ಲಿ ನಾಡಿನ ಹೆಮ್ಮೆಯ ಕವಿ ಬಿ.ಆರ್. ಲಕ್ಷ್ಮಣರಾವ್ ಅವರ ಆಯ್ದ 10 ಗೀತೆಗಳ ಗಾಯನ (ಕರೋಕೆಯೊಂದಿಗೆ ಹಾಡುವ) ತರಬೇತಿ ನೀಡಲಾಗುವುದು. ವಿದ್ಯಾಲಯದ ಸಂಸ್ಥಾಪಕರಾದ ಶ್ರೀಮತಿ ಯಶಾ ದಿನೇಶ್ ಅವರ ಪರಿಕಲ್ಪನೆ ಹಾಗೂ ನಿರ್ದೇಶನದಲ್ಲಿ ಈ ಶಿಬಿರ ಏರ್ಪಾಡಾಗಿದೆ.

ಶಿಬಿರದಲ್ಲಿ ಗಾಯನದ ಜೊತೆಗೆ ಕವಿಯ ಜೀವನ, ಸಾಧನೆ, ಸಾಹಿತ್ಯ ರಚನೆ ಕುರಿತ ಮಾಹಿತಿಯನ್ನೂ ತಿಳಿಸಿ ಕೊಡಲಾಗುತ್ತದೆ. ರಸಪ್ರಶ್ನೆ, ಗಾದೆ, ಒಗಟು ಮುಂತಾದ ಚಟುವಟಿಕೆಗಳೂ, ಸವಿಯಲು ರುಚಿಯಾದ ತಿನಿಸುಗಳೂ ಇರಲಿವೆ. 6 ವರ್ಷ ಮೇಲ್ಪಟ್ಟ ಎಲ್ಲಾ ವಯೋಮಾನದವರು ಭಾಗವಹಸಬಹುದು ವಿವರಕ್ಕೆ ಸಂಪರ್ಕಿಸಿ : 94498 08886.

## ಪ್ರಜ್ವಲ್ ವಿರುದ್ಧ ಮತ್ತೊಂದು ಪ್ರಕರಣ

ಬೆಂಗಳೂರು, ಮೇ 10 – ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ. ಇದರೊಂದಿಗೆ ಲೈಂಗಿಕ ಪೀಡನೆಗೆ ಸಂಬಂಧಿಸಿದಂತೆ ಪ್ರಜ್ವಲ್ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಮೇ 8ರಂದು ಬೆಂಗಳೂರಿನಲ್ಲಿ ಪ್ರಜ್ವಲ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

## ಇಸ್ರೋದಿಂದ 3ಡಿ ರಾಕೆಟ್ ಪರೀಕ್ಷೆ ಯಶಸ್ವಿ

ಬೆಂಗಳೂರು, ಮೇ 10 – 3ಡಿ ತಂತ್ರಜ್ಞಾನ ಎಂದೇ ಹೆಸರಾಗಿರುವ ಅಡಿಕ್ಟಿವ್ ಮ್ಯಾನುಫ್ಯಾಕ್ಚರಿಂಗ್ ಮೂಲಕ ರೂಪಿಸಲಾದ ಪಿಎಸ್4 ಇಂಜಿನ್‌ನ ದೀರ್ಘಾವಧಿ ಪರೀಕ್ಷೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಯಶಸ್ಸು ಕಂಡಿದೆ.

ನೂತನ ಇಂಜಿನ್ ಅನ್ನು ಒಂದೇ ಬಿಡಿ ಭಾಗದಿಂದ ರೂಪಿಸಲಾಗಿದೆ. ಇದರಿಂದ ಶೇ.97ರಷ್ಟು ಕಚ್ಚಾ ವಸ್ತುಗಳು ಉಳಿತಾಯವಾಗಲಿವೆ. ಉತ್ಪಾದನಾ ಸಮಯದಲ್ಲಿ ಶೇ.60ರ ಇಳಿಕೆಯಾಗಲಿದೆ ಎಂದು ಇಸ್ರೋ ತಿಳಿಸಿದೆ.

## ನಗರದಲ್ಲಿ ಇಂದು ಕಿವಿ, ಮೂಗು, ಗಂಟಲು ತಪಾಸಣೆ

ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದವರಿಗೆ ಡಾ.ಎ.ಎಂ. ಶಿವಕುಮಾರ್ ಅವರ ಕಿವಿ, ಮೂಗು ಮತ್ತು ಗಂಟಲು ಆಸ್ಪತ್ರೆಯಲ್ಲಿ ಇಂದು ಬೆಳಗ್ಗೆ 11ರಿಂದ ಮಧ್ಯಾಹ್ನ 3ರ ವರೆಗೆ ಉಚಿತ ತಪಾಸಣೆ ನಡೆಯಲಿದೆ.


St. Johns Baptist Educational Association (R).

**St. JOHN'S HIGH SCHOOL**

Shivakumaraswamy Badavane, HRB Layout, Davangere - 05

**100% SSLC RESULT - 2023-24**

**SCHOOL TOPPERS**



Name : AMULYA N.S.
Marks Obtained : 605
Kan : 125/125



Name : VARSHITHA H.K.
Marks Obtained : 605
Kan : 125/125

DISTINCTION - 20
FIRST CLASS - 35
SECOND CLASS - 09

ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಹಾಗೂ ಶಾಲೆಯ ಶಿಕ್ಷಕರನ್ನು ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.



**SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE, DAVANGERE**

#5335, 1st Main, Road, Near Bapuji Engineering College, Swamy vivekananda badavane, Davanagere, Karnataka.

**REQUIRED TEACHERS & SMEs**

We invite well qualified & experienced teachers for our CBSE & ICSE Schools

**WALK IN INTERVIEW**

Date : 10.05.2024 to 12.05.2024 | Timing: 10 am to 4 pm

SCIENCE, MATHS, SOCIAL & ENGLISH

| CLASS | SALARY |
|---|---|
| 1st-4th Std | Upto 37K |
| 5th-8th Std | Upto 45K |
| 9th 10th Std | Upto 55K |

Subject - Matter Expert (SME)
MATH, PHYSICS, CHEMISTRY, BIOLOGY, SOCIAL & ENGLISH
SALARY Upto - 75K

1. Physical Education Trainer (Male & Female candidates) ( Food & Accommodation will be provided )
2. Music & Dance Teachers

Co-ordinators : For Middle School & High School.
Salary: upto 50K

Mail Your resume along with Experience to: hrspsm.set@gmail.com or
Whatsapp : 9686266990 For Enquiry Call : 8970071100



ಜಿ.ಎಂ ಎಜುಕೇಶನ್ ಟ್ರಸ್ಟ್ (ರಿ)

**ಸನ್‌ರೈಸ್ ಪ್ರಿ-ಸ್ಕೂಲ್**

ಪ್ಲೇಗ್ರೂಪ್ | ನರ್ಸರಿ | ಎಲ್.ಕೆ.ಜಿ. | ಯು.ಕೆ.ಜಿ

**SUNRISE PRE-SCHOOL**

Playgroup || Nursery | L.K.G. || U.K.G







ADMISSION OPEN

On : 10 May 2024

#430, Nijalingappa Layout,
Opp. Sri Bakkeshwara Kalyana Mantapa,
Near Ring Road Circle, Davangere-577004

9448053519, 6363286099, 08192 - 220008



**ತೃತೀಯ ವರ್ಷದ ಪುಣ್ಯಸ್ಮರಣೆ**



**ಶ್ರೀ ನಿಟ್ಟುವಳ್ಳಿ ಬಸವರಾಜಪ್ಪನವರು**

ಜನನ : 13.03.1953 - ಮರಣ : 12.05.2021

ಸಂತಸ ನೀಡುವ ತಂದೆಯಾಗಿ, ಆಸರೆ ನೀಡುವ ಸ್ನೇಹಿತರಾಗಿ, ಎಲ್ಲರ ಮನದೊಳಗೆ ಶಾಶ್ವತವಾಗಿ ನೆಲೆಸಿ, ಮರೆಯಾದ ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳು ಸಂದರೂ ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ....

ಇವರ ಆತ್ಮ ಶಾಂತಿಗಾಗಿ

"ಮೂರನೇ ವರ್ಷದ ಪುಣ್ಯಸ್ಮರಣೆ"ಯನ್ನು

ದಿನಾಂಕ :12.05.2024ರ ಭಾನುವಾರ ಬೆಳಿಗ್ಗೆ 11.00 ಕ್ಕೆ ಶಾಮನೂರು ಗ್ರಾಮದ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಅವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತ್ನಿ : ಶ್ರೀಮತಿ ಎನ್.ಬಿ. ನಾಗರತ್ನಮ್ಮ, ಮಕ್ಕಳಾದ : ಎನ್.ಬಿ. ಮಂಜುನಾಥ್, ಎನ್.ಬಿ. ಮಧು ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ನಿಟುವಳ್ಳಿ ವಂಶಸ್ಥರು,ಬಂಧುಗಳು-ಸ್ನೇಹಿತರು, ಶಾಮನೂರು. ಸಣ್ಣಗೌಡ್ರು ವಂಶಸ್ಥರು, ಬಿ. ಕಲಪನಹಳ್ಳಿ. ಫೋ. : 88618 90444


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas